# ಕಳೆಗುಂದಿದ ಅಣುಶಕ್ತಿ

ಏಪ್ರಿಲ್ ತಿಂಗಳು ಮತ್ತು ಅಣು ದುರಂತಗಳಿಗೆ ಹತ್ತಿರದ ನಂಟು ಇರುವ ಹಾಗೆ ಕಾಣುತ್ತಿದೆ. ಈ ತಿಂಗಳು ಸೋವಿಯತ್ ಒಕ್ಕೂಟದ ಸೇನಾ ಇಲಾಖೆಯ ಅಣುಶಕ್ತಿ ಚಾಲಿತ ಜಲಂತರ್ಗಾಮಿ ನಾರ್ವೇ ದೇಶದ ಹತ್ತಿರ ಮುಳುಗಿ ಅನಾಹುತಕ್ಕೀಡಾಯಿತು. ಅದರಲ್ಲಿರುವ ಅಣುಸ್ಥಾವರವನ್ನು ನಿಲ್ಲಿಸಲಾಗಿತ್ತು, ಮುಳುಗಿದ ನಂತರ ವಿಕಿರಣದ ಅಪಾಯವಿಲ್ಲ ಎಂದು ಅಧ್ಯಕ್ಷ ಗೋರ್ಬಾಚೆವ್ ಅವರೇ ಭರವಸೆ ನೀಡಿದರೂ ವಿಕಿರಣದ ಪರಿಣಾಮ ಕ್ರಮೇಣವಾಗಿ ಕಂಡುಬರುವದೆಂಬ ಸಂದೇಹವನ್ನು ವಿಜ್ಞಾನಿಗಳು ವ್ಯಕ್ತಪಡಿಸಿದ್ದಾರೆ. ಏಪ್ರಿಲ್ ತಿಂಗಳ 25. 1981 ರಂದು ಜಪಾನ್‌ನಲ್ಲಿ ತ್ಸುರುಗಾ ಅಣುಸ್ಥಾವರದಲ್ಲಿ ಸಣ್ಣ ಪ್ರಮಾಣದ ದುರ್ಘಟನೆಯಿಂದಾಗಿ 45 ಜನರು ವಿಕಿರಣದಿಂದ ಪ್ರಭಾವಿತರಾಗಿದ್ದರು. ಚೆರ್ನೋಬಿಲ್ ದುರ್ಘಟನೆ ಸಂಭವಿಸಿದ್ದು ಏಪ್ರಿಲ್ 26. 1986 ರಂದು. ಸೋವಿಯತ್ ಸರಕಾರ ವಿಶ್ವಕ್ಕೆ ಈ ಘಟನೆಯ ಬಗ್ಗೆ ತತ್‌ಕ್ಷಣ ತಿಳಿಸದೇ ಹೋದರೂ ಸಹ ಸ್ಕಾಂಡಿನೇವಿಯನ್ ದೇಶಗಳಾದ ನಾರ್ವೇ ಸ್ವೀಡನ್‌ನಲ್ಲಿ ಸೋವಿಯತ್ ರಾಷ್ಟ್ರದಿಂದ ಬೀಸಿ ಬಂದ ಗಾಳಿಯಲ್ಲಿ ವಿಕಿರಣ ತೂರಿ ಬಂದು ಜನರು ಎಚ್ಚತ್ತಾಗ ಚೆರ್ನೋಬಿಲ್ ವಿವರಗಳನ್ನು ಮಾಸ್ಕೊ ವಿಶ್ವಕ್ಕೆ ನೀಡಿತು. ಅಣುಶಕ್ತಿಯ ದುರಂತ ಮತ್ತು ಭೋಪಾಲ್‌ನಂತಹ ದುರಂತಗಳಲ್ಲಿ ಈ ವ್ಯತ್ಯಾಸವಿದೆ. ಭೋಪಾಲ್‌ದಲ್ಲಿ ಜನರು ವಿಷಾನಿಲದಿಂದ ಪ್ರಭಾವಿತರಾಗಿ ಸಂಕಟಪಟ್ಟು ಮರಣ ಹೊಂದಿದರು. ಕಣ್ಣನ್ನು (ದೃಷ್ಟಿಯನ್ನು) ಕಳೆದುಕೊಂಡರು. ಆದರೆ ಚೆರ್ನೋಬಿಲ್ ಸುತ್ತಮುತ್ತಲಿನ ಜನರಿಗೆ ವಿಕಿರಣದಿಂದ ಅಪಾಯಕ್ಕೀಡಾದರೂ ಸಹ ಸಂಕಟಪಟ್ಟು, ಮರಣಕ್ಕೀಡಾಗಲಿಲ್ಲ, ಆ ದುರ್ಘಟನೆಯಲ್ಲಿ ಕೇವಲ 31 ಜನರು ಸತ್ತರೆಂದು ಸರಕಾರಿ ಹೇಳಿಕೆ ಸ್ಪಷ್ಟಪಡಿಸಿದೆ. ಆದರೆ ಸಾವಿರಾರು ಮಹಿಳೆಯರು ಗರ್ಭಪಾತ ಮಾಡಿಸಿಕೊಂಡದ್ದನ್ನು. ಮುಂಬರುವ ವರ್ಷಗಳಲ್ಲಿ ಹೆಚ್ಚಲಿರುವ ಕ್ಯಾನ್ಸರ್ ಮರಣದ ಭಯ ಜನರನ್ನು ಸದಾ ಕಾಡುತ್ತಿದೆ.

ಚೆರ್ನೋಬಿಲ್. ಸೋವಿಯತ್ ಒಕ್ಕೂಟದಲ್ಲಿ ಮಾತ್ರವಲ್ಲ ಯೂರೋಪ್‌ನ ಇತರ ದೇಶಗಳಲ್ಲಿ ಅಪಾರವಾದ. ಆರ್ಥಿಕವಾಗಿ ಅಳೆಯಲು ಸಾಧ್ಯವಾಗದ ಹಾನಿಯನ್ನು ಉಂಟುಮಾಡಿತು. ಭಾರತವೂ ಆ ದೇಶಗಳು ಭಿಕ್ಷೆ ನೀಡಿದ ಬೆಣ್ಣೆಯನ್ನು ಪಡೆದು ಜನರಲ್ಲಿ ಮಾರಾಟಮಾಡಿ ಹಣಗಳಿಸಿತು. ಆ ಬೆಣ್ಣೆಯಲ್ಲಿ ಇರುವ ವಿಕಿರಣದ ಪ್ರಮಾಣ ಅಪಾಯಕಾರಿಯಲ್ಲ ಎಂಬ ಹೇಳಿಕೆಯನ್ನು ಅಣು ವಿಜ್ಞಾನಿಗಳು. ಸರಕಾರ ಹೇಳಿದ ನಂತರವೂ ಚರ್ಚೆಯ ಬಿಸಿ ಕುಂದಲಿಲ್ಲ.

ಚೆರ್ನೋಬಿಲ್ ವಿವಿಧ ದೇಶದಲ್ಲಿ ನಡೆಯುತ್ತಿದ್ದ ಅಣುಶಕ್ತಿ ವಿರೋಧಿ ಚಳವಳಿಗೆ ಅಗಾಧವಾದ ಜನ ಬೆಂಬಲವನ್ನು ಗಳಿಸಿಕೊಟ್ಟಿತು. ಈ ದುರ್ಘಟನೆಯ ನಂತರ ನಡೆದ ಜನಮತ ಸಂಗ್ರಹಣೆಯಿಂದ ಜಪಾನ್‌ನಲ್ಲಿ ಶೇಕಡಾ 86 ರಷ್ಟು ಜನ ಅಣುಶಕ್ತಿ ಅಪಾಯಕಾರಿ. ಅದರಿಂದ ನಿರಂತರವಾಗಿ ಜನರ ಮನಸ್ಸಿನಲ್ಲಿ ಭಯ ಉಂಟಾಗಿದೆ ಎಂದರೆ. ಕೆನಡಾದಲ್ಲಿ ಶೇಕಡಾ 75 ಜನ ಅಣುಶಕ್ತಿಯ ಮೇಲಿನ ಅವಲಂಬನೆಯನ್ನು ಪೂರ್ಣವಾಗಿ ಕೈಬಿಡಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ವಾಷಿಂಗ್‌ಟನ್‌ನಲ್ಲಿರುವ ವಿಶ್ವ ಸಂಪನ್ಮೂಲ ಸಂಸ್ಥೆ ತನ್ನ ಇತ್ತೀಚಿನ ಪ್ರಕಟನೆಯೊಂದರಲ್ಲಿ ನೀಡಿದ ವರದಿಯಂತೆ 1986 ರಲ್ಲಿ ವಿಶ್ವದ ಹಲವಾರು ದೇಶಗಳಲ್ಲಿ 243 ಹೊಸ ಅಣುಸ್ಥಾವರನ್ನು ಕಟ್ಟುವ ಕೆಲಸ ನಡೆಯುತ್ತಿತ್ತು, ಆದರೆ ಚೆರ್ನೋಬಿಲ್ ಪ್ರಭಾವದಿಂದ 1987ರ ಕೊನೆಯಲ್ಲಿ 150 ಸ್ಥಾವರಗಳನ್ನು ರದ್ದುಗೊಳಿಸಲಾಗಿತ್ತು, ಇದರಲ್ಲಿ ಹಲವಾರು ಸ್ಥಾವರುಗಳು ಪೂರ್ಣಗೊಂಡಿದ್ದರೂ ಅವುಗಳು ಕಾರ್ಯವನ್ನು. ಅಣುಶಕ್ತಿಯ ಉತ್ಪಾದನೆಯನ್ನು ಮಾಡದಂತೆ ಸರಕಾರ

ಪಾಂಡುರಂಗ ಹೆಗಡೆ

ನಿರ್ಣಯ ತೆಗೆದುಕೊಂಡಿರುವುದು ಅಣುಶಕ್ತಿಯು ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತಿರುವುದರ ಸಂಕೇತವಾಗಿದೆ. ಈ ಸ್ಥಾವರಗಳನ್ನು ಮುಚ್ಚುವ ನಿರ್ಣಯ ಕೈಗೊಂಡದ್ದು ಸುರಕ್ಷತೆಯ ಭಯದಿಂದಾಗಿ ಆಗಿರದೆ ಆರ್ಥಿಕವಾಗಿ ಅಣುಶಕ್ತಿಯ ಉತ್ಪಾದನೆ ಲಾಭದಾಯಕವಲ್ಲ ಎಂಬ ಕಾರಣ ಪ್ರಮುಖವಾಗಿತ್ತು.

ಜಗತ್ತಿನಲ್ಲಿ 1986 ರಲ್ಲಿ 398 ಅಣುಸ್ಥಾವರಗಳು ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿತ್ತು, ಅಮೆರಿಕಾ ಮತ್ತು ಕೆನಡಾದಲ್ಲಿ 118. ಯೂರೋಪ್‌ನಲ್ಲಿ 148. ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ 114.

## ಚೆರ್ನೋಬಿಲ್ ಸ್ಮರಣೆ

ಏಷ್ಯಾದಲ್ಲಿ 53 ಸ್ಥಾವರಗಳು ಕಾರ್ಯ ಮಾಡುತ್ತಿವೆ. ಏಷ್ಯಾದಲ್ಲಿ ಜಪಾನ್‌ನಲ್ಲಿ ಅತೀ ಹೆಚ್ಚಿನ ಅಣುಸ್ಥಾವರಗಳಿವೆ. ಆ ಚಿಕ್ಕ ದೇಶದಲ್ಲಿ, ಸದಾ ಭೂಕಂಪ ಪ್ರಭಾವಿತವಾಗಿರುವ ದೇಶದಲ್ಲಿ 34 ಸ್ಥಾವರಗಳು ಕೆಲಸ ಮಾಡುತ್ತಲಿವೆ. ಪ್ರತಿವಾರ ಜಪಾನ್‌ನಿಂದ ಅಣು ಭಸ್ಮವನ್ನು ಫ್ರಾನ್ಸ್, ಇಂಗ್ಲೆಂಡ್‌ಗೆ ವಿಮಾನದಲ್ಲಿ ಒಯ್ಯಲಾಗುತ್ತಿದೆ. ಅಪಾಯಕಾರಿಯಾಗಿರುವ ಈ ವಸ್ತುವನ್ನು ಸಾಗಾಟ ಮಾಡುವ ವಿಮಾನ ಅಪಘಾತಕ್ಕೀಡಾದರೆ ದೊಡ್ಡ ದುರಂತವಾಗುವುದು ಖಚಿತ. ಭಾರತ ಮತ್ತು ದಕ್ಷಿಣ ಕೊರಿಯಾದಲ್ಲಿ ತಲಾ 6 ಸ್ಥಾವರಗಳಿವೆ.

### ಸ್ಥಾವರಗಳ ರದ್ದು

ಇರಾನ್‌ನಲ್ಲಿ ನಿರ್ಮಾಣವಾಗುತ್ತಲಿದ್ದ ಎಂಟು ಸ್ಥಾವರಗಳನ್ನು ಕೈಬಿಡಲಾಗಿದೆ. ಫಿಲಿಪ್ಪೀನ್ಸನಲ್ಲಿ ಮಾರ್ಕೋಸ್‌ನ ಮಾರ್ಷಲ್ ಲಾ ಆಡಳಿತದಲ್ಲಿ ಬಾತಾನ್ ಎಂಬಲ್ಲಿ ಅಮೆರಿಕದ ವೆಸ್ಟಿಂಗ್‌ಹೌಸ್ ಸಂಸ್ಥೆಯ ಸಹಾಯದಿಂದ 3000 ಕೋಟಿ ರೂಪಾಯಿ ವೆಚ್ಚದಲ್ಲಿ ಅಣುಸ್ಥಾವರದ ನಿರ್ಮಾಣ 1985 ರಲ್ಲಿ ಪೂರ್ಣಗೊಂಡಿತ್ತು, ಮಾರ್ಕೋಸ್ ಪತನದ ನಂತರ ನಡೆದ ರಾಷ್ಟ್ರಪತಿಯ. ಚುನಾವಣೆಯ ಸಮಯದಲ್ಲಿ ಕೊರಾಜನ್ ಆಕ್ವಿನೋ ತಾವು ಆರಿಸಿ ಬಂದರೆ ಅಣುಸ್ಥಾವರನ್ನು ರದ್ದುಪಡಿಸುವ ಭರವಸೆ ನೀಡಿದ್ದರು. ಅವರು ಆರಿಸಿ ಬಂದು ರಾಷ್ಟ್ರಪತಿಯಾದ ನಂತರ ಆ ಸ್ಥಾವರ ಅಪಾಯಕಾರಿ ಎಂದು ರದ್ದುಪಡಿಸಿ ತಮ್ಮ ಮಾತನ್ನು ಉಳಿಸಿಕೊಂಡರು. ಫಿಲಿಪ್ಪೀನ್ಸ್ ಸರಕಾರವು 1988 ರಲ್ಲಿ ಈ ಅಣುಸ್ಥಾವರವನ್ನು ಕಟ್ಟಿದ ಸಂಸ್ಥೆಯ ವಿರುದ್ಧ ದಾವೆಯನ್ನು ಹೂಡಿದ್ದು, ಅಪಾಯಕಾರಿ ಸ್ಥಳದಲ್ಲಿ ನಿರ್ಮಿಸಿದ್ದಕ್ಕಾಗಿ ದೇಶಕ್ಕೆ ಆಗಿರುವ ಹಾನಿಯನ್ನು ತುಂಬಿಕೊಡುವಂತೆ ಕೇಳಿಕೊಂಡಿದೆ.

ಚೆರ್ನೋಬಿಲ್ ಸಂಭವಿಸಿದ ಸೋವಿಯತ್ ರಾಷ್ಟ್ರದಲ್ಲಿ ಅಣುಶಕ್ತಿ ತನ್ನ ಪ್ರಭಾವ ಕಳೆದುಕೊಂಡಿದೆ. ಇತ್ತೀಚಿನ ವರದಿಗಳ ಪ್ರಕಾರ ಅಲ್ಲಿನ ಸರಕಾರವು ಆರು ಅಣುಸ್ಥಾವರಗಳ ನಿರ್ಮಾಣವನ್ನು ರದ್ದುಪಡಿಸಿದೆ. ಇದರಲ್ಲಿ ಒಂದು ಸ್ಥಾವರ ಕುಸೆಂಡರ ಎಂಬಲ್ಲಿ ಅರ್ಧ ನಿರ್ಮಾಣವಾಗಿದ್ದು 30 ಮಿಲಿಯ ಡಾಲರ್ ಹಣ ಖರ್ಚಾಗಿತ್ತು, ಇಷ್ಟು ಹಣ ವ್ಯಯಿಸ್ಸಿದ್ದರೂ ಒಂದು ಕಮ್ಯುನಿಸ್ಟ್ ಸರಕಾರ ಜನರ ಚಳವಳಿಗೆ ಮನ್ನಣೆಕೊಟ್ಟು ರದ್ದು ಮಾಡಿರುವದು ದೊಡ್ಡ ಸಾಧನೆ ಎನ್ನಬಹುದು.

### ನೈತಿಕ ಜವಾಬ್ದಾರಿ

ಚೆರ್ನೋಬಿಲ್‌ನ ಅಣುಸ್ಥಾವರವನ್ನು ನಿರ್ಮಾಣ ಮಾಡಲು ಸಹಾಯ ಮಾಡಿದ ಸೋವಿಯತ್ ಅಣುವಿಜ್ಞಾನಿ ವಾಲೇರಿ ಲಿಗಸೋವ್ ಏಪ್ರಿಲ್ 27. 1988 ರಂದು. ದುರ್ಘಟನೆಯ ಎರಡು ವರ್ಷದ ನಂತರ ಆತ್ಮಹತ್ಯೆ ಮಾಡಿಕೊಂಡನು. ದುರ್ಘಟನೆಯಿಂದಾಗಿರುವ ವಿನಾಶವನ್ನು ನೋಡಿ ಅವನು ಪರಿತಪಿಸಿ ತನ್ನ ನೈತಿಕ ಜವಾಬ್ದಾರಿಯನ್ನು ಅರಿತು ತಾನೇ ಪ್ರಾಯಶ್ಚಿತ್ತ ಮಾಡಿಕೊಂಡನು.

ಆದರೆ ನಮ್ಮಲ್ಲಿಯ ಅಣುವಿಜ್ಞಾನಿಗಳು ಅಣುಶಕ್ತಿಯಿಂದ ಯಾವುದೇ ಅಪಾಯವಿಲ್ಲ, ಚರ್ನೋಬಿಲ್ ನಂತಹ ಅಪಘಾತ ಎಂದಿಗೂ ಸಂಭವಿಸಲಾರದು ಎಂಬ ಭರವಸೆಯನ್ನು ಜನರಿಗೆ ನೀಡುತ್ತಲಿದ್ದಾರೆ. ಈಗ ಅಣುಶಕ್ತಿ ಆಯೋಗದಿಂದ ನಿವೃತ್ತರಾಗಿರುವ ಡಾ. ರಾಜಾರಾಮಣ್ಣ ಹಿಂದೊಮ್ಮೆ ಕೈಗಾ ವಿರೋಧಿಗಳಿಗೆ ಭರವಸೆ ನೀಡುತ್ತಾ ತಾವು ನಿವೃತ್ತರಾದ ನಂತರ ಕೈಗಾದಲ್ಲಿ ವಾಸ ಮಾಡುವುದಾಗಿ ಭರವಸೆ ನೀಡಿದ್ದು ಜನರಿಗೆ ಇನ್ನೂ ನೆನಪಿದೆ. ಆದರೆ ಇಂದು ಅವರು ನಿವೃತ್ತರಾಗಿ ಬೆಂಗಳೂರಿನಲ್ಲಿ ತಮ್ಮ ಬಂಗಲೆಯಲ್ಲಿ ವಾಸಿಸುತ್ತಲಿದ್ದಾರೆ. ನಮ್ಮ ವಿಜ್ಞಾನಿಗಳಿಗೂ ಭರವಸೆ ನೀಡುವ ರಾಜಕಾರಣಿಗಳಿಗೂ ಯಾವುದೇ ಅಂತರವಿಲ್ಲ ಎಂಬುದನ್ನು ಜನರಿಗೆ ತೋರಿಸಿಕೊಟ್ಟಿದ್ದಾರೆ. ಅವರ ನಂತರ ಈಗ ಡಾ. ಶ್ರೀನಿವಾಸನ್ ತಾವೂ ಕರ್ನಾಟಕದವರು, ಮಣ್ಣಿನ ಮಗ ಎಂದಿಗೂ ತಾಯಿನಾಡಿಗೆ ಅಪಾಯ ಉಂಟಾಗುವ ಕೆಲಸ ಮಾಡಲಾರೆ ಎಂದು ಅಣುಶಕ್ತಿಗೆ ಬೆಂಬಲ ಪಡೆಯಲು ಯತ್ನಿಸಿದ್ದಾರೆ. ರಾಜ್ಯದ ವಿಶ್ವವಿದ್ಯಾನಿಲಯಗಳಿಗೆ ಅಣುಶಕ್ತಿ ಆಯೋಗವು ಹಣ ನೀಡಿ ವಿಚಾರಗೋಷ್ಠಿಗಳನ್ನು ಏರ್ಪಡಿಸಿ ವಿದ್ಯಾವಂತರನ್ನು ತನ್ನೆಡೆ ಸೆಳೆದುಕೊಳ್ಳುವ

9ನೇ ಪುಟ ನೋಡಿ